



ಟೀಚರ್: ಹೆಚ್ಚು ಎತ್ತರದಲ್ಲಿ ಹಾರಬಲ್ಲ ಪಕ್ಷಿ ಯಾವುದು?

ಗುಂಡ: ಚಿರತೆ.

ಟೀಚರ್: ಚಿರತೆ ಪಕ್ಷಿಯೇನೋ ದಡ್ಡ...? ಮನೆಯಲ್ಲಿ ನಿನಗೆ ಯಾರು ಓದಿಸುವುದು?

ಗುಂಡ: ಅಮ್ಮ

ಟೀಚರ್: ಹಾಗಾದರೆ ಅಪ್ಪ ಏನು ಮಾಡುತ್ತಾರೆ?

ಗುಂಡ: ಅವರು ಪೊಲೀಸ್ ಇಲಾಖೆಯಲ್ಲಿ ಎನ್ ಕೌಂಟರ್ ಸ್ಪೆಷಲಿಸ್ಟ್ ಆಗಿದ್ದಾರೆ...!

ಟೀಚರ್: ಮಕ್ಕಳೇ, ಬರೆಯಿರಿ... ಚಿರತೆ ಹೆಚ್ಚು ಎತ್ತರದಲ್ಲಿ ಹಾರಬಲ್ಲ ಪಕ್ಷಿಯಾಗಿದೆ...!

★★★

ಗುಂಡ: ಎರಡು ಸೀಲಿಂಗ್ ಫ್ಯಾನ್ ಕೊಡಿ, ಒಂದು ಜೆಂಟ್ಸ್ ಮತ್ತೊಂದು ಲೇಡೀಸ್.

ಸೇಲ್ಸ್ ಮ್ಯಾನ್: ಫ್ಯಾನ್‌ಗಳಲ್ಲಿ ಜೆಂಟ್ಸ್ ಲೇಡೀಸ್ ಎಂದು ಲಿಂಗ ಭೇದವಿಲ್ಲ.

ಗುಂಡ: ಉಷಾ ಲೇಡೀಸ್ ಮತ್ತು ಬಜಾಜ್ ಜೆಂಟ್ಸ್ ತಾನೇ...?

★★★

ವೈಟರ್: ಸರ್... ತಮ್ಮ ಬಿಲ್ ಸ್ವೀಕರಿಸಿ.

ಗುಂಡ: ತಗೋ ನನ್ನ ಕಾರ್ಡ್.

ವೈಟರ್: ಆದರೆ ಸರ್... ಇದು ತಮ್ಮ ರೇಷನ್ ಕಾರ್ಡ್.

ಗುಂಡ: .ಹಾಗಾದರೆ 'ಇಲ್ಲಿ ಎಲ್ಲಾ ಕಾರ್ಡ್‌ಗಳನ್ನೂ ಸ್ವೀಕರಿಸಲಾಗುತ್ತದೆ' ಎಂದು ಹೊರಗಡೆ ಬರೆದು ಹಾಕಿರುವುದು ತಮಾಷೆಗಾಗಿಯೇನು?

★★★

ತನ್ನ ಮನೆಯಂಗಳದಲ್ಲಿ ಬೆಳೆದ ತುಳಸಿಗಿಡದೆಲೆಗಳನ್ನು ಗುಂಡ ಶೀತ–ಕಫಗಳಿಗೆ ಔಷಧಿಗಾಗಿ ಬಳಸದೆ ಪಕ್ಕದ ಮನೆಯಿಂದ ಎರವಲು ಪಡೆಯುತ್ತಾನೆ, ಏಕೆ ಗೊತ್ತೆ?

ಹಿತ್ತಲ ಗಿಡ ಮದ್ದಲ್ಲ!

★★★

ತಪ್ಪು: ತಿಳಿವಳಿಕೆಯ ಪರಮಾವಧಿ!

ತನ್ನ ಆಜ್ಞೆಗಳನ್ನು ಚಾಚೂ ತಪ್ಪದೆ ಪಾಲಿಸುವಳೆಂಬ ದೂರಾಲೋಚನೆಯಿಂದ ಬಾಸ್ ತನ್ನ ಸೆಕ್ರೆಟರಿಯನ್ನೇ ಮದುವೆಯಾಗುವುದು!

★★★

ವಧು ಪರೀಕ್ಷೆಗಾಗಿ ಆಗಮಿಸಿದ ಅಚ್ಚಗನ್ನಡದ ಭಾವೀ ಅತ್ತೆ ಹುಡುಗಿಯನ್ನು ಪ್ರಶ್ನಿಸಿದರು...

ನಿನ್ನ ವಿದ್ಯಾರ್ಹತೆಯೇನು, ಕನ್ನಡದಲ್ಲಿ ಹೇಳು.

ಭಾವೀ ವಧು: ಕಣ್ಣು ಕಣ್ಣು ಚಹಾ.

ಭಾವೀ ಅತ್ತೆ: ಹಾಗಂದರೆ?

ಭಾವೀ ವಧು: ಐ.ಐ.ಟಿ.!

★★★

ನೀವು ಮದ್ಯವ್ಯಸನಿಯಾಗಿರುವಿರಾ?

ಹಾಗಿದ್ದರೆ ಕೂಡಲೇ ಕರೆ ಮಾಡಿ, ನಾವು ನಿಮಗೆ ಸಹಾಯ ಮಾಡುತ್ತೇವೆ.

ದಿನಪತ್ರಿಕೆಯ ನಡುವೆ ಹೀಗೊಂದು ಕರಪತ್ರವನ್ನು ಕಂಡ ಗುಂಡನ ಮಡದಿ ಅಲ್ಲಿಗೆ ಕರೆಮಾಡುವಂತೆ ಒತ್ತಾಯಿಸಿದಳು.

ಅನ್ಯ ಮಾರ್ಗವಿಲ್ಲದೆ ಗುಂಡ ಕರೆ ಮಾಡಿದ.

ಅದೊಂದು ವೈನ್ ಶಾಪ್‌ನ ವಿಶೇಷ ಮಾರಾಟ ಕೊಡುಗೆಯಾಗಿದ್ದು, ಮೂರು ಬಾಟಲ್ ಖರೀದಿಸಿದರೆ ಒಂದು ಬಾಟಲ್ ಉಚಿತ ಎನ್ನುವ ಮಾಹಿತಿ ದೊರೆಯುತ್ತಲೇ ಗುಂಡನ ಕಂಗಳಲ್ಲಿ ಆನಂದಾಶ್ರು ಜಿನುಗಲಾರಂಭಿಸಿತು!

★★★

ಅಮ್ಮ ಹೊಡೆದಾಗ ಪುಟ್ಟ ಅಳಲಾರಂಭಿಸಿದ... ಅಮ್ಮ ಕ್ಷಮೆ ಕೇಳಿದಳು. ಆಗ ಚಾಣಾಕ್ಷ ಪುಟ್ಟನೆಂದ, 'ಅಮ್ಮ, ಒಂದು ಪೇಪರನ್ನ ಮಡಚಿ ಮುದ್ದೆ ಮಾಡಿದ ಬಳಿಕ ಕ್ಷಮೆ ಕೇಳಿದರೆ ಅದರ ನೆರಿಗೆ ಹೋಗುವುದಿಲ್ಲ ತಾನೆ? ಸಂಬಂಧಗಳು ಕೂಡಾ ಹಾಗೆಯೇ...

ಬುದ್ಧಿವಂತೆ ಅಮ್ಮ ಉತ್ತರಿದಸಿದಳು 'ಅಪ್ಪನ ಬೈಕ್ ಸ್ಟಾರ್ಟ್ ಮಾಡಿ ನೋಡು, ಎರಡು–ಮೂರು ಕಿಕ್ ಹೊಡೆದ ನಂತರ ತಾನೆ ಅದು ಸ್ಟಾರ್ಟ್ ಆಗುವುದು?

ನೀನೂ ಆ ಬೈಕಿನ ತರಹವೇ ವಿನಃ ಯಾವುದೇ ಪೇಪರಿನಂತಲ್ಲ... ಇನ್ನು ಮುಂದೆ ಈ ಫೇಸ್ ಬುಕ್– ವಾಟ್ಸಪ್ ಜ್ಞಾನ ಅಮ್ಮನಿಗೆ ಉಪದೇಶಿಸಬೇಡ...!

★★★

ಕುಡುಕ: ಗಂಟೆ ಎಷ್ಟಾಯಿತು?

ದಾರಿಹೋಕ: ಏಳು ಗಂಟೆ ಇಪ್ಪತ್ತು ನಿಮಿಷ.

ಕುಡುಕ: ಥತ್... ಯಾರೂ ಸರಿಯಾದ ಸಮಯವನ್ನೇ ಹೇಳುತ್ತಿಲ್ಲವಲ್ಲಾ... ಆವಾಗಿನಿಂದ ಕೇಳುತ್ತಿದ್ದೇನೆ. ಪ್ರತಿಯೊಬ್ಬರೂ ಬೇರೆ ಬೇರೆ ಸಮಯವನ್ನೇ ಹೇಳುತ್ತಿದ್ದಾರೆ!

(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

